ಜೀವನದಲ್ಲಿ ನೆಮ್ಮದಿಯ ಹುಡುಕಾಟದಲ್ಲಿ ಇರುವಿರಾ? ಸುಖ ಸಂತೋಷ ಎನ್ನುವುದು ಮರೀಚಿಕೆ ಆಗಿದೆಯೆ? ಹಾಗಾದರೆ, ನೀವು ಕೈಲಾಸಕ್ಕೆ ಹೋಗುವುದೇ ಸೂಕ್ತ. ಮನುಷ್ಯಜನ್ಮದ ಸಾರ್ಥಕತೆ ಇರುವುದೇ ಸುಖಪಡುವುದರಲ್ಲಿ ಎನ್ನುವ ತಾತ್ವಿಕತೆಯ ಕೈಲಾಸದಲ್ಲಿ ತಪ್ಪುಗಳಿಗೆ ಮೂರು ಬಾರಿ ಮಾಫಿಯಿದೆ. ಅಷ್ಟು ಮಾತ್ರವಲ್ಲ, ಮಾಡಿಕೊಡುವ ಜೊತೆಗೆ ಸಂಬಳದ ಜೊತೆಗೆ ಉಪಸಂಪಾದನೆಗೂ ಹಸಿರುನಿಶಾನೆಯಿದೆ. ಇದೆಲ್ಲವೂ 'ಏಪ್ರಿಲ್ 1'ರ ಕಟ್ಟುಕಥೆ ಎಂದಿರಾ? ಕೈಲಾಸಪತಿಯೊಂದಿಗಿನ ಈ ಮಾತುಕತೆಯನ್ನು ಓದಿದರೆ ವಾಸ್ತವ ನಿಮಗೆ ಅರ್ಥವಾಗುವುದು ಮಾತ್ರವಲ್ಲ; ಕೈಲಾಸದ ವೀಸಾ ಸಂಪಾದಿಸಲು ತುದಿಗಾಲಲ್ಲಿ ನಿಲ್ಲುವುದರಲ್ಲಿ ಅನುಮಾನವಿಲ್ಲ.

■ ಎಂ.ಎಸ್. ನರಸಿಂಹಮೂರ್ತಿ

ಕಲೆ: ಭಾವು ಪತ್ತಾರ್

